(6) ಈ ಹಿಂದೆ ನೀಡಿದ್ದ ಮಧ್ಯಮಾವಧಿ ಸಾಲಗಳಿಗೆ ಶೇಕಡ 6 ಬಡ್ಡಿ ಮುಂದುವರೆದಿದ್ದು, 2005–06 ನೇ ಸಾಲಿನಲ್ಲಿ ಸಹಕಾರಿ ಸಂಸ್ಥೆಗಳು ರೈತರಿಗೆ ನೀಡಿರುವ ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲಗಳಿಗೆ ಸಂಬಂಧಿಸಿದಂತೆ ಸರ್ಕಾರವು ನೀಡಬೇಕಾದ ಬಡ್ಡಿ ಸಹಾಯ ಧನದ ಮೊತ್ತ ರೂ 143 71 ಕೋಟಿ ಆಗಿದ್ದು ಇದರಲ್ಲಿ 115 14 ಕೋಟಿ ರೂ ಗಳನ್ನು ಬಿಡುಗಡೆ ಮಾಡಲಾಗಿದೆ

727 (714) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ(ಬಸವಕಲ್ಯಾಣ) – ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಬೀದರ್ ಜಿಲ್ಲೆಯಲ್ಲಿರುವ ಪಡಿತರ ಅಂಗಡಿಗಳ ಮತ್ತು ಸೀಮೆಎಣ್ಣೆ ಪರವಾನಗಿಗಳ ಸಂಖ್ಯೆ ಎಷ್ಟು,

(ಆ) ನಿಯಮಗಳ ಪ್ರಕಾರ ಎಷ್ಟು ಜನಸಂಖ್ಯೆಗೆ ಒಂದರಂತೆ ಇವುಗಳಿಗೆ ಪರವಾನಗಿಯನ್ನು ನೀಡಲಾಗುವುದು,

(ಇ) ಈ ಪೈಕಿ ಬೀದರ್ ಜಿಲ್ಲೆಗೆ ಇನ್ನೂ ಎಷ್ಟು ಪಡಿತರ ಅಂಗಡಿಗಳು ಹಾಗೂ ಸೀಮೆಎಣ್ಣೆ ಪರವಾನಗಿಗಳ ಅವಶ್ಯಕತೆ ಇದೆ,

(ಈ) ಈ ಅವಶ್ಯಕತೆಯನ್ನು ಪೂರೈಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಗೋವಿಂದ ಎಂ ಕಾರ್ಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಸಚಿವರು) –

(ಅ) 724 ನ್ಯಾಯಬೆಲೆ ಅಂಗಡಿ ಮತ್ತು 968 ಸೀಮೆಎಣ್ಣೆ (ನ್ಯಾಯಬೆಲೆ ಅಂಗಡಿದಾರರಿಗೆ ಸಹ ಸೀಮೆಎಣ್ಣೆ ಹಂಚಿಕೆ ಇರುತ್ತದೆ)

(ಆ) ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ವ್ಯವಸ್ಥೆ) ನಿಯಂತ್ರಣ ಆದೇಶ, 1992 ರನ್ವಯ ಗ್ರಾಮಾಂತರ ಪ್ರದೇಶದಲ್ಲಿ ಕನಿಷ್ಠ 500 ಪಡಿತರ ಚೀಟಿಗಳು ಲಭ್ಯವಿದ್ದಲ್ಲಿ ನ್ಯಾಯ ಬೆಲೆ ಅಂಗಡಿ ಮಂಜೂರು ಮಾಡಲಾಗುವುದು

(ಇ) ಹೊಸ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲು ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ನಿಯಂತ್ರಣ ಆದೇಶ 1992ರ ಅವಕಾಶಗಳಿಗೆಗೊಳಪಟ್ಟು ಮಾರ್ಗಸೂಚಿಗಳನ್ವಯ ಕ್ರಮ ಕೈಗೊಳ್ಳಲಾಗುವುದು)

(ಈ) ನ್ಯಾಯಬೆಲೆ ಅಂಗಡಿ ಮಂಜೂರು ಮಾಡಲು ಅರ್ಜಿ ಸ್ವೀಕರಿಸಲಾಗಿದ್ದು, ಸದರಿ ಅರ್ಜಿಗಳನ್ನು ಸರ್ಕಾರದ ನಿಯಮಗಳ ಪ್ರಕಾರ ವರ್ಗವಾರು (ರೋಸ್ಟರ್ ನಿಯಮದಂತೆ) ಮೀಸಲಾತಿ ಪಟ್ಟಿ ಸಿದ್ದಪಡಿಸಿ

ಅರ್ಹರಿಗೆ ಅಂಗಡಿ ಪ್ರಾಧಿಕಾರ ಮಂಜೂರು ಮಾಡಲು ಕ್ರಮವಹಿಸಲಾಗುವುದು

728 (715) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) – ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಬೀದರ್ ಜಿಲ್ಲೆಯಲ್ಲಿರುವ ಪಡಿತರ ಅಂಗಡಿಗಳ ಮತ್ತು ಸೀಮೆಎಣ್ಣೆ ಪರವಾನಗಿಯನ್ನು ಹೊಂದಿರುವವರ ಸಂಖ್ಯೆ ಎಷ್ಟು (ಪರವಾನಗಿ ಹೊಂದಿರುವವರ ಹೆಸರು ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು),

(ಆ) ಈ ಪಡಿತರ ಅಂಗಡಿಗಳು ಪ್ರತಿ ತಿಂಗಳು ಯಾವ ದಿನಾಂಕದೊಳಗೆ ಪಡಿತರವನ್ನು ವಿತರಣೆ ಮಾಡುತ್ತಿವೆ, ಇದಕ್ಕೆ ಇರುವ ನಿಯಮಗಳೇನು,

(ಇ) ಜಿಲ್ಲೆಯಲ್ಲಿರುವ ಪಡಿತರ ಅಂಗಡಿ ಹಾಗೂ ಸೀಮೆಎಣ್ಣೆ ಪರವಾನಗಿಗಳ ಪೈಕಿ ಎಷ್ಟರ ಮೇಲೆ ಸಾರ್ವಜನಿಕ ದೂರುಗಳಿವೆ,

(ಈ) ಇವುಗಳ ಮೇಲೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ಹಾಗೂ ಎಷ್ಟನ್ನು ರದ್ದುಪಡಿಸಲಾಗಿದೆ (ಅಂಗಡಿವಾರು ವಿವರಗಳನ್ನು ಒದಗಿಸುವುದು)

ಶ್ರೀ ಗೋವಿಂದ ಎಂ ಕಾರ್ಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಸಚಿವರು) –

(ಅ) ಬೀದರ್ ಜಿಲ್ಲೆಯಲ್ಲಿ ಒಟ್ಟು 724 ನ್ಯಾಯ ಬೆಲೆ ಅಂಗಡಿಗಳು ಇರುತ್ತವೆ ಮತ್ತು 968 ಸೀಮೆಎಣ್ಣೆ ಪರವಾನಿಗೆದಾರರು ಇರುತ್ತಾರೆ (968 ರ ಪೈಕಿ ನ್ಯಾಯಬೆಲೆ ಅಂಗಡಿದಾರರು ಸೀಮೆಎಣ್ಣೆ ಪರವಾನಿಗೆ ಹೊಂದಿರುತ್ತಾರೆ) ಪರವಾನಿಗೆ ಹೊಂದಿರುವವರ ಹೆಸರು ಮತ್ತು ವಿಳಾಸಗಳನ್ನು ವಿಧಾನಸಭಾ ಕ್ಷೇತ್ರವಾರು ಪ್ರತ್ಯೇಕವಾಗಿ ಲಗತ್ತಿಸಿದೆ

(ಆ) ನ್ಯಾಯಬೆಲೆ ಅಂಗಡಿಗಳು ಪ್ರತಿ ತಿಂಗಳು 20 ನೇ ತಾರೀಖಿನ ಒಳಗೆ ಸಗಟು ಮಳಿಗೆಗೆ ಡಿಡಿ ಕಟ್ಟಿ ಆಹಾರಧಾನ್ಯಗಳನ್ನು 25 ನೇ ತಾರೀಖಿನ ಒಳಗೆ ಎತ್ತುವಳಿ ಮಾಡಿ ತಿಂಗಳ ಅಂತ್ಯದವರೆಗೂ ವಿತರಣೆ ಮಾಡಲು ನಿಯಮ ಇರುತ್ತದೆ ಪಡಿತರ ಅಂಗಡಿದಾರರು ನ್ಯಾಯಬೆಲೆ ಅಂಗಡಿಯನ್ನು ಬೆಳಿಗ್ಗೆ 8–00 ಗಂಟೆಯಿಂದ 12–00 ಗಂಟೆಯವರೆಗೆ ಮತ್ತು ಮಧ್ಯಾಹ್ನ 4–00 ಗಂಟೆಯಿಂದ ಸಂಜೆ 8–00 ಗಂಟೆಯವರೆಗೆ ಆಹಾರಧಾನ್ಯಗಳನ್ನು ವಿತರಿಸಲು ನಿಯಮ ಇರುತ್ತದೆ

(ಇ) 65 ನ್ಯಾಯಬೆಲೆ ಅಂಗಡಿ ಮತ್ತು ಸೀಮೆಎಣ್ಣೆ ಅಂಗಡಿ ವರ್ತಕರ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿರುತ್ತವೆ

(ಈ) ಈ ಪೈಕಿ 37 ಪರವಾನಿಗೆದಾರರ ಪ್ರಾಧಿಕಾರಿಗಳನ್ನು ಅಮಾನತ್ತು ಗೊಳಿಸಿದ್ದು, 17 ಪ್ರಾಧಿಕಾರಿಗಳನ್ನು ರದ್ದುಗೊಳಿಸಲಾಗಿದೆ ಅಮಾನತ್ತುಪಡಿಸಿದ /